ನಿವೇದನೆ

# ಮಕ್ಕಳೊಂದಿಗೆ ಶಿಕ್ಷಕರ ಚೈತನ್ಯವನ್ನೂ ಉಳಿಸಿಕೊಳ್ಳುವುದು ಸದ್ಯದ ತುರ್ತು

ಕಲ್ಯಾಣ ಕರ್ನಾಟಕ ಭಾಗದಲ್ಲಿ 2020ರ ಮಾರ್ಚ್‌ನಿಂದ ಇಲ್ಲಿಯವರೆಗೆ 150ಕ್ಕೂ ಹೆಚ್ಚು ಶಿಕ್ಷಕರು ಕೋವಿಡ್ ಬಾಧೆಯಿಂದ ಸಾವಿಗೀಡಾಗಿದ್ದಾರೆ. ಈ ನತದೃಷ್ಟರಲ್ಲಿ ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡವರೂ ಸೇರಿದ್ದಾರೆ. ಶಿಕ್ಷಕರ ಕರ್ತೃತ್ವ ಶಕ್ತಿಯನ್ನು ಸರ್ಕಾರ ಮೊದಲಿನಿಂದಲೂ ಅಲಕ್ಷಿಸುತ್ತಿತ್ತು; ಈಗ ಅವರ ಜೀವಗಳನ್ನೂ ನಿರ್ಲಕ್ಷಿಸುತ್ತಿರುವಂತಿದೆ.



ಈಶ್ವರ್

ಕೊರೊನಾ ಸೋಂಕಿನ ಆತಂಕ ಶುರುವಾದಾಗಿನಿಂದ ಹಿರಿಯ ನಾಗರಿಕರು ಹಾಗೂ ಮಧುಮೇಹ, ರಕ್ತದೊತ್ತಡಗಳಂತಹ ಸಮಸ್ಯೆ ಇರುವವರ ಆರೋಗ್ಯದ ಬಗ್ಗೆ ಸಮಾಜ ಕಾಳಜಿಯ ಮಾತುಗಳನ್ನಾಡುತ್ತಿದೆ. ಕೊರೊನಾದ ಮುಂದಿನ ಗುರಿ ಮಕ್ಕಳು ಎನ್ನುವ ಸಾಧ್ಯತೆಯ ಹಿನ್ನೆಲೆಯಲ್ಲಿ ಮಕ್ಕಳ ಆರೋಗ್ಯದ ಬಗ್ಗೆ ಉತ್ಸಾಹದ ಚರ್ಚೆಗಳಾಗುತ್ತಿವೆ. ಇಂಥ ಕಾಳಜಿ ಹಾಗೂ ಚರ್ಚೆಗಳು ಆರೋಗ್ಯಕರ ಸಮಾಜದಲ್ಲಿ ಸಹಜವಾಗಿ ನಡೆಯುತ್ತವೆ. ಇಂಥ ಆರೋಗ್ಯಕರ ಸಮಾಜದಲ್ಲಿ ಶಿಕ್ಷಕರನ್ನು ನಾವು ನಡೆಸಿಕೊಳ್ಳುತ್ತಿರುವ ರೀತಿ ಆದರ್ಶಪ್ರಾಯವೇನಲ್ಲ.

'ಗುರು ದೇವೋಭವ' ಎನ್ನುವ ಮಾತು ನಮ್ಮಲ್ಲಿ ಚಾಲ್ತಿಯಲ್ಲಿದ್ದರೂ, ಶಿಕ್ಷಕರ ಮಹತ್ವವನ್ನು ನಾವು ಗುರ್ತಿಸಿರುವುದು ಹಾಗೂ ಗೌರವಿಸಿರುವುದು ಅಷ್ಟರಲ್ಲೇ ಇದೆ. ಶಿಕ್ಷಕರ ಸಂಘಟನೆಗಳಿದ್ದರೂ, ಶಿಕ್ಷಕರ ಪ್ರತಿನಿಧಿಗಳು ಶಾಸನಸಭೆಯಲ್ಲಿದ್ದರೂ ಅವರ ಹಿತಾಸಕ್ತಿ ಸಾಧನೆಯಾಗಿರುವುದು ಅಷ್ಟಕ್ಕಷ್ಟೆ. ಸರ್ಕಾರಗಳು ಶಿಕ್ಷಕರನ್ನು ಜೀತದಾಳುಗಳಂತೆ ನಡೆಸಿಕೊಂಡಿವೆ, ನಡೆಸಿಕೊಳ್ಳುತ್ತಿವೆ. ಶಿಕ್ಷಕರ ಬಹುತೇಕ ಸೇವೆ ಪಠ್ಯೇತರ ಚಟುವಟಿಕೆಗಳಲ್ಲಿಯೇ ಮುಗಿದುಹೋಗುವಂತೆ ಶಿಕ್ಷಣ ವ್ಯವಸ್ಥೆಯ ಸ್ವರೂಪವಿದೆ. ಜನಗಣತಿ, ಜಾತಿಗಣತಿ, ಚುನಾವಣೆ ಸೇರಿದಂತೆ ಎಲ್ಲ ಕೆಲಸಗಳಿಗೂ ಶಿಕ್ಷಕರೇ ಬೇಕು. ಕೋವಿಡ್ ಕರ್ತವ್ಯದ ನಿಯೋಜನೆಗೆ ಕೂಡ ಮೊದಲು ನೆನಪಾಗುವುದು ಶಿಕ್ಷಕರೇ. ಕೊರೊನಾ ಕರ್ತವ್ಯಕ್ಕೆ ನಿಯೋಜನೆಗೊಂಡ ಅನೇಕ ಶಿಕ್ಷಕರು ಜೀವ ಕಳೆದುಕೊಂಡಿದ್ದಾರೆ. ಕಲ್ಯಾಣ ಕರ್ನಾಟಕ ಭಾಗದಲ್ಲಿ 2020ರ ಮಾರ್ಚ್‌ನಿಂದ ಇಲ್ಲಿಯವರೆಗೆ 150ಕ್ಕೂ ಹೆಚ್ಚು ಶಿಕ್ಷಕರು ಕೋವಿಡ್ ಬಾಧೆಯಿಂದ ಸಾವಿಗೀಡಾಗಿದ್ದಾರೆ ಎಂದು ಸರ್ಕಾರಿ ಅಂಕಿಅಂಶಗಳು ಹೇಳುತ್ತಿವೆ. ಈ ನತದೃಷ್ಟರಲ್ಲಿ ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡವರೂ ಸೇರಿದ್ದಾರೆ. ಶಿಕ್ಷಕರ ಕರ್ತೃತ್ವ ಶಕ್ತಿಯನ್ನು ಸರ್ಕಾರ ಮೊದಲಿನಿಂದಲೂ ಅಲಕ್ಷಿಸುತ್ತಿತ್ತು; ಈಗ ಅವರ ಜೀವಗಳನ್ನೂ ನಿರ್ಲಕ್ಷಿಸುತ್ತಿರುವಂತಿದೆ.

ಕೊರೊನಾ ಸಂದರ್ಭದಲ್ಲಿ ಸರ್ಕಾರಿ ಶಾಲೆ ಶಿಕ್ಷಕರು, ಕಳೆದ ಹಾಗೂ ಪ್ರಸಕ್ತ ವರ್ಷ ಬೇಸಿಗೆ ರಜೆ ಪಡೆಯದೆ ಕೆಲಸ ಮಾಡಿದ್ದಾರೆ. 'ವಿದ್ಯಾಗಮ' ಯೋಜನೆ ಜಾರಿಯಲ್ಲಿದ್ದಾಗ, ಉದ್ಯಾನ, ದೇಗುಲ, ಮನೆಗಳ ಜಗಲಿಗಳಲ್ಲಿ ಮಕ್ಕಳನ್ನು ಕೂರಿಸಿಕೊಂಡು ಪಾಠ ಹೇಳಿದ್ದಾರೆ. ಕೊರೊನಾ ಕರ್ತವ್ಯ ಇಲ್ಲದಿದ್ದ ಸಂದರ್ಭದಲ್ಲಿ, ಮಕ್ಕಳು ಶಾಲೆಗೆ ಬಾರದಿದ್ದರೂ ಶಾಲೆಗೆ ಹೋಗಿ ಕೂತು ಬರುವಂತೆ ಅವರನ್ನು ಒತ್ತಾಯಿಸಲಾಗಿದೆ. ಪ್ರಾಥಮಿಕ ಶಿಕ್ಷಣ ವಲಯದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶಿಕ್ಷಕಿಯರೇ ಇದ್ದು, ಅವರು ಕುಟುಂಬ ಮತ್ತು ಕೊರೊನಾ ಕರ್ತವ್ಯದ ನಡುವೆ ಹೈರಾಣಾಗಿದ್ದಾರೆ. ಪ್ರಾಥಮಿಕ ಸೌಲಭ್ಯಗಳ ಕೊರತೆಯ ನಡುವೆಯೂ ಕೊರೊನಾ ಕರ್ತವ್ಯದಲ್ಲಿ ತೊಡಗಿಕೊಂಡಿದ್ದಾರೆ.

ಅನುದಾನಿತ ಶಾಲೆಗಳ ಶಿಕ್ಷಕರು ಹಾಗೂ ಶಾಲಾಸಿಬ್ಬಂದಿಯ ಸಂಕಟ ಮತ್ತಷ್ಟು ದಾರುಣವಾದುದು. ಪೋಷಕರಿಗೆ ಹೊರೆಯಾಗುತ್ತದೆನ್ನುವ ಕಾರಣದಿಂದಾಗಿ ಕಳೆದ ಶೈಕ್ಷಣಿಕ ವರ್ಷದಲ್ಲಿ ಸರ್ಕಾರ ಶಾಲಾ ಶುಲ್ಕದಲ್ಲಿ ವಿನಾಯಿತಿ ಕಲ್ಪಿಸಿತ್ತು. ರಿಯಾಯಿತಿ ಶುಲ್ಕವನ್ನು ಕಟ್ಟಲು ಕೂಡ ಅನೇಕ ಪೋಷಕರು ಹಿಂಜರಿದಿದ್ದರು. ಇದರ ಪರಿಣಾಮ ಖಾಸಗಿ ಶಾಲೆಗಳ ಶಿಕ್ಷಕರು ಮತ್ತು ಸಿಬ್ಬಂದಿಯ ಮೇಲೆ ಉಂಟಾಗಿದೆ. ಕೆಲವರ ಸಂಬಳ ಕಡಿತವಾಗಿದ್ದರೆ, ಬಹಳಷ್ಟು ಜನ ಕೆಲಸವನ್ನೇ ಕಳೆದುಕೊಂಡಿದ್ದಾರೆ. ಹೊಟ್ಟೆಪಾಡಿಗಾಗಿ ತರಕಾರಿ ಮಾರಾಟ, ನರೇಗಾ ಯೋಜನೆಯಡಿ ಕೂಲಿ ಕೆಲಸ ಮಾಡಿರುವ ಶಿಕ್ಷಕರಿದ್ದಾರೆ.

ಗುಣಮಟ್ಟದ ನಾಗರಿಕರನ್ನು ರೂಪಿಸುವ ಶಿಲ್ಪಿಗಳ ರೂಪದಲ್ಲಿ ಶಿಕ್ಷಕರನ್ನು ಗುರ್ತಿಸಲಾಗುತ್ತದೆ. ಮಕ್ಕಳಲ್ಲಿ ಭರವಸೆ, ಕಲಿಕೆಯ ಬಗ್ಗೆ ಪ್ರೀತಿ, ಸೃಜನಶೀಲ ಶಕ್ತಿಯನ್ನು ತುಂಬುವ ವ್ಯಕ್ತಿಗಳನ್ನಾಗಿ ಬಣ್ಣಿಸಲಾಗುತ್ತದೆ. ದುರದೃಷ್ಟವಶಾತ್ ಈ ಹೇಳಿಕೆಗಳೆಲ್ಲವೂ ನಮ್ಮ ಸಮಾಜದಲ್ಲಿ ಬಣ್ಣನೆಗಳಾಗಿಯೇ ಉಳಿದಿವೆ. ಮಕ್ಕಳಲ್ಲಿ ಆತ್ಮವಿಶ್ವಾಸ ತುಂಬಬೇಕಾದ ಶಿಕ್ಷಕರೇ ಬದುಕಿನ ಬಗ್ಗೆ ಭರವಸೆ ಕಳೆದುಕೊಳ್ಳುವ ಪರಿಸ್ಥಿತಿ ತಲೆದೋರಿದೆ. ಅನುದಾನಿತ ಶಾಲೆಗಳ ಸಿಬ್ಬಂದಿಯ ನೆರವಿಗೆ ಮುಂದಾಗುವಂತೆ ಶಿಕ್ಷಣ ಸಚಿವರು ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದ್ದಾರೆ. ಮನವಿ ಸಲ್ಲಿಸಲು ಸಚಿವರು ಒಂದು ವರ್ಷಕ್ಕೂ ಹೆಚ್ಚು ಸಮಯ ತೆಗೆದುಕೊಂಡಿರುವಾಗ, ನೆರವು ಇನ್ನೆಷ್ಟು ವೇಗದಲ್ಲಿ ದೊರೆಯುವುದೋ?

ಇಂದಲ್ಲಾ ನಾಳೆ ಕೊರೊನಾ ಸೋಂಕಿನ ಅಧ್ಯಾಯ ಕೊನೆಗೊಳ್ಳುತ್ತದೆ ಇಲ್ಲವೇ ಕೊರೊನಾ ಸೋಂಕಿಗೆ ಜಗತ್ತು ಒಗ್ಗಿಕೊಳ್ಳುತ್ತದೆ. ಆಗ, ಶಾಲೆಗಳಲ್ಲಿ ಮಕ್ಕಳ ಕಲರವ ಮತ್ತೆ ತುಂಬಿಕೊಳ್ಳುತ್ತದೆ. ಕಲಿಕೆಯ ನಂಟು ಕಳೆದುಕೊಂಡ ಮಕ್ಕಳನ್ನು ಪೋಷಕರು ಶಾಲೆಗೆ ತಂದುಬಿಡುತ್ತಾರೆ. ಆದರೆ, ಆ ಮಕ್ಕಳನ್ನು ಶಾಲೆಯ ಶಿಸ್ತಿಗೆ ಒಗ್ಗಿಸಬೇಕಾದ ಶಿಕ್ಷಕವೃಂದವೇ ದಣಿದುಕೂತಿರುವ ಸನ್ನಿವೇಶ ಎದುರಾದರೆ ಆಶ್ಚರ್ಯವೇನೂ ಇಲ್ಲ. ಮಕ್ಕಳಿಗೆ ಭರವಸೆ, ಆತ್ಮವಿಶ್ವಾಸ ತುಂಬಬೇಕಾದ ಶಿಕ್ಷಕರ ಕಣ್ಣುಗಳಲ್ಲೇ ಕನಸುಗಳು ಇಂಗಿಹೋಗಿದ್ದರೆ ಅದು ಅಸಹಜವೂ ಅಲ್ಲ. ಸದ್ಯದ ನಮ್ಮ ತುರ್ತು ಮಕ್ಕಳನ್ನು ಉಳಿಸಿಕೊಳ್ಳುವುದಷ್ಟೇ ಅಲ್ಲ; ಆ ಮಕ್ಕಳನ್ನು ಕೈಹಿಡಿದು ನಡೆಸಬೇಕಾದ ಶಿಕ್ಷಕರ ಚೈತನ್ಯವನ್ನು ಉಳಿಸಿಕೊಳ್ಳುವುದೂ ಆಗಿದೆ.

■ ರಘುನಾಥ ಚ.ಹ.